

# ನೀರಿನ ಮಹತ್ವ

■ ಬಾಲು ಪಟಗಾರ

ಒಂದೂರಿನಲ್ಲಿ ಸೋಮನೆಂಬ ವ್ಯಕ್ತಿಯು ವಾಸವಾಗಿದ್ದನು. ಅವನು ಬಹಳ ದುರಾಸೆಯುಳ್ಳವನಾಗಿದ್ದನು. ಅವನು ಯಾವಾಗಲೂ ದಿಡೀರ್ ಶ್ರೀಮಂತನಾಗುವ ಕನಸು ಕಾಣುತ್ತಿದ್ದನು. ಹಣ, ಬಂಗಾರವೇ ಎಲ್ಲಕ್ಕಿಂತ ಶ್ರೇಷ್ಠ ಎಂದು ಭಾವಿಸಿದ್ದನು.

ಒಮ್ಮೆ ಆ ಊರಿಗೆ ವಿಶೇಷ ಶಕ್ತಿಯುಳ್ಳ ಪಂಡಿತರು ಆಗಮಿಸಿದ್ದರು. ಆ ಊರಿನ ಎಲ್ಲ ಪ್ರಜೆಗಳು ಆ ಪಂಡಿತರ ಬಳಿ ಬಂದು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದರು. ಅದೇ ರೀತಿ ಸೋಮನು ಸಹ ಈ ಪಂಡಿತರ ಬಳಿ ಬಂದು, 'ಸ್ವಾಮಿ, ನನಗೆ ದಿಡೀರ್ ಶ್ರೀಮಂತನಾಗುವ ಯಾವುದಾದರೂ ದಾರಿ ಇದ್ದರೆ ಹೇಳಿ' ಎಂದನು. ಆಗ ಆ ಪಂಡಿತರು 'ನೀನು ಶ್ರೀಮಂತನಾಗುವ ದಾರಿ ಇದೆ; ಇದೇ ಬೆಟ್ಟದ ಆಚೆ ಒಂದು ಖರ್ಜೂರದ ಮರ ಇದೆ; ಆ ಮರದ ಬುಡದಲ್ಲಿ ಬಂಗಾರದ ಒಡವೆಗಳ ರಾಶಿಯೇ ಇದೆ, ನಿನಗೆ ಬೇಕಾದಷ್ಟು ಒಡವೆಗಳನ್ನು ತೆಗೆದುಕೊಳ್ಳಬಹುದು; ಆದರೆ ಆ ಜಾಗ ಇಲ್ಲಿಂದ ಬಹಳಷ್ಟು ದೂರದಲ್ಲಿದೆ, ನೀನು ಹೋಗುವಾಗ ಸಾಕಷ್ಟು ನೀರು, ಆಹಾರವನ್ನು ತೆಗೆದುಕೊಂಡು ಹೋಗಬೇಕು; ಇಲ್ಲದಿದ್ದರೆ ನಿನ್ನ ಪ್ರಾಣಕ್ಕೆ ಅಪಾಯ' ಎಂದರು.

ಸೋಮ ಸಾಕಷ್ಟು ನೀರು, ಆಹಾರ ತೆಗೆದುಕೊಂಡು ಪಂಡಿತರು ಹೇಳಿದ ದಿಕ್ಕಿನಲ್ಲಿ ಸಾಗಿದನು. ಅಂತು ಇಂತು ಅವರು ಹೇಳಿದ ಜಾಗವನ್ನು ಕಷ್ಟಪಟ್ಟು ತಲುಪಿದನು. ಅಷ್ಟೊತ್ತಿಗಾಗಲೆ ಅವನು ತಂದ ಅರ್ಧಕ್ಕಿಂತ ಹೆಚ್ಚು ನೀರು, ಆಹಾರ ಖರ್ಚಾಗಿಬಿಟ್ಟಿತು. ಅಲ್ಲಿಯ ಬಂಗಾರದ ರಾಶಿಯನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡನು. ತಾನು ತಂದ ಚೀಲದಲ್ಲಿ ಸಾಕಷ್ಟು ತುಂಬಿಕೊಂಡನು. ಆದರೂ ಅವನಿಗೆ ತೃಪ್ತಿಯಾಗಲಿಲ್ಲ. ಉಳಿದ ನೀರು, ಆಹಾರವನ್ನು ಚೆಲ್ಲಿ ಅದರಲ್ಲೂ ಬಂಗಾರವನ್ನು ತುಂಬಿಕೊಂಡು, ತನ್ನ ಮನೆಯ ದಾರಿ ಹಿಡಿದನು. ಬಿಸಿಲಿನಲ್ಲಿ ನಡೆದು ನಡೆದು ಅವನಿಗೆ ಸುಸ್ತಾಯಿತು. ನೀರಡಿಕೆಯಾಯಿತು; ಹಸಿವೆಯಾಯಿತು. ಕುಡಿಯೋಣವೆಂದ್ರೆ ನೀರಿರಲಿಲ್ಲ. ತಿನ್ನೋಣವೆಂದ್ರೆ ತಿನ್ನಲು ಏನೂ ಇರಲಿಲ್ಲ. ಬರೀ ಬಂಗಾರದ ಮೂಟೆಗಳಿದ್ದವು. ಮುಂದೆ ಒಂದೇ ಒಂದು ಹೆಜ್ಜೆ ಇಡಲು ಅವನಿಗೆ ಸಾಧ್ಯವಾಗಲಿಲ್ಲ. ತಾನು ನೀರಿಲ್ಲದೆ ಇಲ್ಲೇ ಸತ್ತು ಹೋಗುವೆನೆಂದು ಅವನಿಗೆ ಅನಿಸಿತು. ಅಲ್ಲೇ ಕುಸಿದು ಕುಳಿತ. ಜೀವನದಲ್ಲಿ ಮೊದಲ ಬಾರಿ ಅವನಿಗೆ ನೀರಿನ ಬೆಲೆ ಏನೆಂಬುದು ತಿಳಿಯಿತು. ಯಾರಾದರೂ ಬಂದು ನೀರು ಕೊಡುವರೋ ಎಂದು ಕಾತರದಿಂದ ನೋಡತೊಡಗಿದ. ದೂರದಲ್ಲಿ ಒಬ್ಬ ಒಂಟೆಯ ಮೇಲೆ ಬರುವುದನ್ನು ನೋಡಿದ. ಇವನಿಗೆ ಹೋದ ಜೀವ ಬಂದಂತಾಯಿತು. ಇವನ ಹತ್ತಿರವೇ ಆತ ಬಂದ. ಸ್ವಲ್ಪ ನೀರು ಕೊಡಪ್ಪಾ ಎಂದು ಕೈಮುಗಿದು ಕೇಳಿದ. ಆಗ ಅವನು 'ನಿನ್ನ ಹತ್ತಿರ ಇರುವುದನ್ನೆಲ್ಲ ಕೊಟ್ಟರೆ ನೀರು ಕೊಡುತ್ತೇನೆ' ಎಂದ. ಇವನ ಹತ್ತಿರ ಬಂಗಾರದ ಗಂಟು ಬಿಟ್ಟರೆ ಬೇರೆ ಏನೂ ಇರಲಿಲ್ಲ. ಆ ಗಂಟನ್ನು ಕೊಡಲು ಇವನು ಒಪ್ಪಲಿಲ್ಲ. ಅವನು ನೀರು ಕೊಡಲು ಒಪ್ಪಲಿಲ್ಲ. ನೀರು ಕುಡಿಯದೇ ಇದ್ರೆ ತಾನು ಸತ್ತೇ ಹೋಗುತ್ತೇನೆಂದು ತಿಳಿದು, ಸೋಮ ಅನಿವಾರ್ಯವಾಗಿ ತನ್ನಲ್ಲಿರುವ ಎಲ್ಲಾ ಬಂಗಾರವನ್ನು ಅವನಿಗೆ ಕೊಟ್ಟು, ಪ್ರತಿಯಾಗಿ ನೀರು ತೆಗೆದುಕೊಂಡನು. ತೃಪ್ತಿಯಾಗುವಷ್ಟು ನೀರು ಕುಡಿದು ಮನೆತನಕ ಸಾಕಾಗುವಷ್ಟು ನೀರನ್ನು ತನ್ನ ಪಾತ್ರೆಯಲ್ಲಿ ತುಂಬಿಕೊಂಡನು. ನೀರಿನ ಮಹತ್ವವನ್ನು ತಿಳಿದುಕೊಂಡನು.

ನೀತಿ: ಎಲ್ಲಾ ಸಂಪತ್ತಿಗಿಂತ ಜಲಸಂಪತ್ತೇ ಶ್ರೇಷ್ಠ ; ಅದಕ್ಕಾಗಿ ಈ ಸಂಪತ್ತನ್ನು ಕಾಪಾಡಬೇಕು.

ವಿಜಯ ಕುಮಾರಿ

